# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ) ರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು –02.**

O/o. Joint Director Town Planning (South) ★

ಸಂಖ್ಯೆ: ಜಂನಿನಯೋ(ದ)/ಪ್ರಾ.ಪ/ಸನಿ/01/2021-22 ದಿನಾಂಕ: 08-04-2021.

**ಭಾಗಶಃ ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಪರವಾನಗಿ ನವೀಕರಣ**

**ವಿಷಯ:** ಸ್ವತ್ತಿನ ಖಾತೆ ಸಂಖ್ಯೆ 31/31, ಕಮ್ಮನಹಳ್ಳಿ ಗ್ರಾಮ, ಬೇಗೂರು ಹೋಬಳಿ, ಬೊಮ್ಮನಹಳ್ಳಿ ವಲಯ, ವಾರ್ಡ್ ನಂ. 192, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ಬಿಲ್ಡಿಂಗ್ 2, 3 & 6 ಸಾಲುಮನೆ (Row House) ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಈಗಾಗಲೇ ನಕ್ಷೆ ಮಂಜೂರಾತಿ ಪಡೆದಿರುವ 2, 3, 6 & 12 ರಿಂದ 20 ರವರೆಗಿನ ಕಟ್ಟಡಗಳ ಪರವಾನಗಿಯನ್ನು ನವೀಕರಿಸುವ ಬಗ್ಗೆ.

**ಉಲ್ಲೇಖ:** 1) ಅರ್ಜಿದಾರರ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿರುವ ಮನವಿ ದಿನಾಂಕ: 05-02-2021.
2) ನಕ್ಷೆ ಮಂಜೂರಾತಿ ಸಂಖ್ಯೆ: BBMP/ Addl.Dir/JD South/ LP 0173/14-15 ದಿನಾಂಕ: 10-11-14.
3) ಅಪರ ನಿರ್ದೇಶಕರು, ನಗರ ಯೋಜನೆ ರವರ ಅನುಮೋದನೆ ದಿನಾಂಕ: 10-02-2021.
4) ಬಿಲ್ಡಿಂಗ್ 4, 7, 8, 9, 10 & 11 ಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಿರುವ ದಿನಾಂಕ: 21–05–2016.
5) ಬಿಲ್ಡಿಂಗ್ 1, 4, 5, 7, 8, 9, 10 & 11 ಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ನೀಡಿರುವ ದಿನಾಂಕ: 07–08–2020.

*****

ಸ್ವತ್ತಿನ ಖಾತೆ ಸಂಖ್ಯೆ 31/31, ಕಮ್ಮನಹಳ್ಳಿ ಗ್ರಾಮ, ಬೇಗೂರು ಹೋಬಳಿ, ಬೊಮ್ಮನಹಳ್ಳಿ ವಲಯ, ವಾರ್ಡ್ ನಂ. 192, ಬೆಂಗಳೂರು ಇಲ್ಲಿನ ಸ್ವತ್ತಿನಲ್ಲಿ ಬಿಲ್ಡಿಂಗ್ 1 ರಿಂದ 20 ರವರೆಗಿನ ನೆಲ + ಮೇಲಿನ 2 ಅಂತಸ್ತುಗಳ 228 ಘಟಕಗಳುಳ್ಳ (including 21 EWS units) ಸಾಲುಮನೆ (Row House) ಕಟ್ಟಡಕ್ಕೆ ಎಲ್.ಪಿ. ಸಂಖ್ಯೆ: BBMP/ Addl.Dir/JD South/ LP/0173/14-15 ದಿನಾಂಕ: 10-11-2014 ರಂದು ನಕ್ಷೆ ಮಂಜೂರಾತಿ ನೀಡಲಾಗಿರುತ್ತದೆ. ಬಿಲ್ಡಿಂಗ್ 4, 7, 8, 9, 10 & 11 ಗಳಿಗೆ ದಿನಾಂಕ: 21–05–2016 ರಂದು ಪ್ರಾರಂಭಿಕ ಪ್ರಮಾಣ ಪತ್ರವನ್ನು ಪಡೆಯಲಾಗಿದ್ದು, ಬಿಲ್ಡಿಂಗ್ 1, 4, 5, 7, 8, 9, 10 & 11 ರಲ್ಲಿ ನೆಲ+ಮೇಲಿನ 2 ಅಂತಸ್ತುಗಳ 115 ಘಟಕಗಳುಳ್ಳ (15 EWS ಘಟಕ ಒಳಗೊಂಡಂತೆ) ಸಾಲುಮನೆ ಕಟ್ಟಡಕ್ಕೆ ದಿನಾಂಕ: 07–08–2020 ರಂದು ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆದಿರುತ್ತಾರೆ. ಉಲ್ಲೇಖ (1) ರ ಮನವಿಗೆ ಸಂಬಂಧಿಸಿದಂತೆ, ದಿನಾಂಕ: 05-02-2021 ರಂದು ಸ್ಥಳ ಪರಿಶೀಲಿಸಲಾಗಿ 2, 3 & 6 ಸಾಲುಮನೆ ಕಟ್ಟಡಗಳಿಗೆ ಮಂಜೂರಾತಿ ನಕ್ಷೆಯನ್ವಯ ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ನಿರ್ಮಿಸಿದ್ದು, ಬಾಕಿ 12 ರಿಂದ 20 ರಲ್ಲಿನ ಸಾಲುಮನೆ ಕಟ್ಟಡಗಳನ್ನು ನಿರ್ಮಾಣ ಮಾಡದೇ ಇರುವುದು ಕಂಡು ಬಂದಿದ್ದು, ಬಿಲ್ಡಿಂಗ್ 2, 3 & 6 ಸಾಲುಮನೆ (Row House) ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಈಗಾಗಲೇ ನಕ್ಷೆ ಮಂಜೂರಾತಿ ಪಡೆದಿರುವ 2, 3, 6 & 12 ರಿಂದ 20 ರವರೆಗಿನ ಕಟ್ಟಡಗಳಿಗೆ ನಕ್ಷೆ ಪರವಾನಗಿಯನ್ನು ನವೀಕರಿಸುವ ಪ್ರಸ್ತಾವನೆಗೆ ಉಲ್ಲೇಖ (3) ರಂತೆ ಅಪರ ನಿರ್ದೇಶಕರು, ನಗರ ಯೋಜನೆ ರವರು ಅನುಮೋದನೆ ನೀಡಿರುತ್ತಾರೆ.

8/4/2021

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

08/04/21 08/04/2021 8/4

Housiey.com

ಅದರಂತೆ, ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ನಕ್ಷೆ ಪರವಾನಗಿ ಶುಲ್ಕ ರೂ. 4,81,08,000/- ಗಳಾಗಿದ್ದು, ಘನ ಉಚ್ಚ ನ್ಯಾಯಾಲಯದ W.P. No. 5492/2021 (LB-BMP) ರಲ್ಲಿ ದಿನಾಂಕ: 18-03-2021 ರಂದು ನೆಲಬಾಡಿಗೆ, ಜಿಎಸ್‌ಟಿ ಶುಲ್ಕ, ಹಾಗೂ Levy and Collection of Cess and Surcharge ಗಳಿಗೆ ಶೇ 100 ರಷ್ಟು ಮತ್ತು ಪರವಾನಗಿ ಶುಲ್ಕ ಶೇ 50 ರಷ್ಟನ್ನು ಪಾವತಿಸಿಕೊಳ್ಳದಂತೆ ತಡೆಯಾಜ್ಞೆಯನ್ನು ನೀಡಲಾಗಿರುವುದರಿಂದ, ತಡೆಯಾಜ್ಞೆಯನ್ನು ನೀಡಲಾಗಿರುವ ಶುಲ್ಕಗಳನ್ನು ಹೊರತುಪಡಿಸಿ ಬಾಕಿ ಶುಲ್ಕ ರೂ. 17,82,660/- ಗಳನ್ನು ರಸೀದಿ ಸಂಖ್ಯೆ: RE-ifms624-TP/000004 ದಿನಾಂಕ: 07-04-2021 ರಂತೆ ಸಂದಾಯಿಸಿಕೊಳ್ಳಲಾಗಿದೆ. ಆದುದರಿಂದ ಬಿಲ್ಡಿಂಗ್ 2, 3 & 6 ಸಾಲುಮನೆ (Row House) ಕಟ್ಟಡಕ್ಕೆ ಈ ಕೆಳಕಂಡ ಷರತ್ತಿಗೊಳಪಡಿಸಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ಹಾಗೂ ಈಗಾಗಲೇ ನಕ್ಷೆ ಮಂಜೂರಾತಿ ಪಡೆದಿರುವ ಬಿಲ್ಡಿಂಗ್ 2, 3, 6 & 12 ರಿಂದ 20 ರವರೆಗಿನ ಸಾಲುಮನೆ ಕಟ್ಟಡಗಳಿಗೆ ನಕ್ಷೆ ಪರವಾನಗಿಯನ್ನು ನವೀಕರಿಸಲಾಗಿದೆ.

1) ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.

2) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

4) ನಕ್ಷೆ ಪರವಾನಗಿ ನವೀಕರಿಸಲಾದ ಬಿಲ್ಡಿಂಗ್ 2, 3, 6 & 12 ರಿಂದ 20 ರವರೆಗಿನ ಸಾಲುಮನೆ ಕಟ್ಟಡಗಳ ಕಾಮಗಾರಿಯನ್ನು ಪೂರ್ಣಗೊಳಿಸಿ, ನಿಯಮಾನುಸಾರ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

5) ದಿನಾಂಕ: 29-03-2021 ರಂದು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ, ಘನ ಉಚ್ಚ ನ್ಯಾಯಾಲಯದ W.P. No. 5492/2021 (LB-BMP) ರಲ್ಲಿ ನೀಡುವ ಅಂತಿಮ ಆದೇಶಕ್ಕೆ ಬದ್ಧರಾಗಿರತಕ್ಕದ್ದು.

6) ಕಟ್ಟಡ ನಿರ್ಮಾಣ ಮತ್ತು ಕಟ್ಟಡ ತೆರವಿನ ತ್ಯಾಜ್ಯದ ನಿರ್ವಹಣೆ ಮತ್ತು ವಿಲೇವಾರಿಯನ್ನು ಮಾಡಲು ಘನತ್ಯಾಜ್ಯ ನಿರ್ವಹಣೆ (ಎಸ್.ಡಬ್ಲ್ಯೂ.ಎಂ) ಉಪನಿಯಮ 2016 ರಂತೆ ನಿರ್ವಹಿಸುವುದು.

7) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸಂಸ್ಕರಿಸಿದ (Treated Water Utilisation for Construction) ನೀರನ್ನು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕಡ್ಡಾಯವಾಗಿ ಒಳಸಿಕೊಳ್ಳುವುದು.

8) ಅರ್ಜಿದಾರರು ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಪಾಯಿಂಟ್‌ಗಳನ್ನು ಅಳವಡಿಸಲು ಅಗತ್ಯ ಕ್ರಮವಹಿಸುವುದು.

9) ಅರ್ಜಿದಾರರು ಪ್ರತಿ 240.00 ಚ.ಮೀ ಅನುಪಾತ ವಿಸ್ತೀರ್ಣಕ್ಕೆ ಒಂದರಂತೆ ಗಿಡವನ್ನು ನೆಡುವುದು.

8/4/2021

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

08/04/21 08/04/2021 8/4

Sri. Raja Udayashankar & Others
Rep. by M/s. Puravankara Projects Ltd.,
# 130/1, Ulsoor Road,
Bangalore-560 042.

# Bruhat Bengaluru Mahanagara Palike

**Office of Joint Director Town Planning South Central Zone**

**Receipt**
**(General Purpose)**
**[para 22(1)]**

| | | | |
|---|---|---|---|
| **Receipt Number** | : RE-ifms624-TP / 000004 | **DDO** | : ddo624 Joint Director Town Planning South Central Zone |
| **Receipt Date** | : 07-Apr-2021 | **Ward** | : 192 Begur |
| **Reference** | : BBMP/Addl.Dir/JD South/0173/14-15 / 10-Feb-2021 | **Credited to** | : Canara Bank, Bangalore City Corpn. E.C. (Cor) (CNRB0008401) - 8401132000014 (TP) |

Received the sum of Rs. 1782660.00 (Seventeen Lakh Eighty Two Thousand Six Hundred Sixty ) from

Sri/Smt Sri Raja Udayashankar and Others
M/s Purvankara Project Ltd ,Khata No 31/31 Kammanahalli Village ,Begur Hobli Bommanahalli Zone Bengaluru

towards the following -
M/s Purvankara Project Ltd

| Sl No | Name | Misc. | Amount | Remarks |
|---|---|---|---|---|
| 1 | R1061 Commencement Certificate Fee | | 375243.00 | |
| 2 | R0109 Building License Fee | | 1407389.00 | |
| 3 | R0157 Misc Receipts | Rounding Off | 28.00 | |
| | | **Total** | **1782660** | |

Amount received as :

| Sl No | Type | Bank | Chq/DD No. | Chq/DD Dt. | Amount |
|---|---|---|---|---|---|
| 1 | DD | Icici Bank Ltd., I.C.I.C.I. Bank Ltd. (Ici) | 505093 | 07-Apr-2021 | 64000.00 |
| 2 | DD | Icici Bank Ltd., I.C.I.C.I. Bank Ltd. (Ici) | 578172 | 30-Mar-2021 | 1718660.00 |
| | | | | **Total** | **1782660** |

**for Bruhat Bengaluru Mahanagara Palike**
**Joint Director Town Planning**
**South Central Zone**

07/4/2021

housiey.com

This Receipt is generated through BBMP - IFMS. Any Manual Alteration Invalidates this Receipt.
c74a10699b0a64b149e1699a2b88a998 - 07-Apr-2021 15:40